# CCE PR

ಸಂಕೇತ ಸಂಖ್ಯೆ : **95-K** ವಿಷಯ : ಸಮಾಜಶಾಸ್ತ್ರ

**Code No. : 95-K** **Subject : SOCIOLOGY**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ ಪ್ರಶ್ನೆಗಳನ್ನು ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $10 \times 1 = 10$

1. ಸಾಮಾಜಿಕ ಬದಲಾವಣೆ ತರುವ ಅತ್ಯಂತ ಪ್ರಭಾವಶಾಲಿ ಮಾಧ್ಯಮ

   (A) ದೂರವಾಣಿ (B) ದೂರದರ್ಶನ

   (C) ರೇಡಿಯೋ (D) ಕರಪತ್ರ

2. ಆಧುನೀಕರಣದ ಮುಖ್ಯ ಗುರಿ

   (A) ವೈಜ್ಞಾನಿಕ ಪ್ರಗತಿ (B) ನಿಯಂತ್ರಣ ಮತ್ತು ಕಟ್ಟುಪಾಡು

   (C) ತಟಸ್ಥ ಸ್ಥಿತಿ (D) ಸಾಂಪ್ರದಾಯಿಕ ಸ್ಥಿತಿ ಕಾಪಾಡುವುದು

3. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕ ಬರೆದವರು

   (A) ಜಿ.ಎಸ್. ಗುರ್ರೆ (B) ಗಾಂಧೀಜಿ

   (C) ನೆಹರೂ (D) ವಿಜಯಲಕ್ಷ್ಮಿ ಪಂಡಿತ್

4. ಬಾರ್ಡೋಲಿ ಸತ್ಯಾಗ್ರಹ ನಡೆದದ್ದು ಇವರ ನೇತೃತ್ವದಲ್ಲಿ

   (A) ಗಾಂಧೀಜಿ (B) ಲಾಲ್‌ಬಹಾದೂರ್ ಶಾಸ್ತ್ರಿ

   (C) ಬಾಲಗಂಗಾಧರ್ ತಿಲಕ್ (D) ಸರ್ದಾರ್ ವಲ್ಲಭಭಾಯಿ ಪಟೇಲ್

5. ರಷ್ಯಾದ ಕ್ರಾಂತಿ ನಡೆದದು ಈ ರಾಜಮನೆತನದ ವಿರುದ್ಧ

   (A) ಮೇಜಿ (B) ಮಂಚು

   (C) ಝಾರ್ (D) ಬಾರ್‌ಬೋಸಾ

6. 9ನೇ ಆಗಸ್ಟ್ 1942 ರಂದು ಭಾರತದಲ್ಲಿ ಆರಂಭಗೊಂಡ ಪ್ರಮುಖ ಚಳುವಳಿ

   (A) ಉಪ್ಪಿನ ಸತ್ಯಾಗ್ರಹ (B) ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯ)

   (C) ಹೋಂ ರೂಲ್ (D) ಕರ ನಿರಾಕರಣೆ

7. ಕಿತ್ತೂರಿನ ರಾಣಿ ಚೆನ್ನಮ್ಮ ಹೋರಾಡಿದ್ದು

(A) ಪೋರ್ಚುಗೀಸರ ವಿರುದ್ಧ (B) ಡಚ್ಚರ ವಿರುದ್ಧ

(C) ಫ್ರೆಂಚರ ವಿರುದ್ಧ (D) ಆಂಗ್ಲರ ವಿರುದ್ಧ

8. ಆಕಾಶವಾಣಿ ಎಂದು ಆಲ್ ಇಂಡಿಯಾ ರೇಡಿಯೋವನ್ನು ಅಧಿಕೃತವಾಗಿ ನಾಮಕರಣ ಮಾಡಿದ್ದು

(A) 1951 ರಲ್ಲಿ (B) 1957 ರಲ್ಲಿ

(C) 1961 ರಲ್ಲಿ (D) 1931 ರಲ್ಲಿ

9. 1971 ನೇ ಇಸವಿಯಲ್ಲಿ ಭಾರತದೊಂದಿಗೆ ಯುದ್ಧ ಮಾಡಿದವರು

(A) ಚೀನಾ (B) ಬಾಂಗ್ಲ

(C) ಪಾಕಿಸ್ತಾನ (D) ಶ್ರೀಲಂಕಾ

10. ಭಾರತದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು 1959 ರಲ್ಲಿ ಪ್ರಸಾರ ಮಾಡಲು ಬಳಸಿಕೊಂಡ ಸಮೂಹ ಮಾಧ್ಯಮ

(A) ರೇಡಿಯೋ (B) ದೂರದರ್ಶನ

(C) ವೃತ್ತ ಪತ್ರಿಕೆ (D) ಟ್ವಿಟರ್

II. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $14 \times 1 = 14$

11. ಕೈಗಾರಿಕೀಕರಣ ಎಂದರೇನು ?

12. ಅನಕ್ಷರತೆ ಎಂದರೇನು ?

13. ಹೊಸ ಆರ್ಥಿಕ ನೀತಿ ಜಾರಿಗೆ ಬಂದದ್ದು ಯಾವಾಗ ?

14. ಭಾರತ ನವೋದಯದ ಪಿತಾಮಹ ಯಾರು ?

15. ಪ್ರಾರ್ಥನ ಸಮಾಜದ ಸ್ಥಾಪಕ ಯಾರು ?

16. ವೇದಗಳಿಗೆ ಹಿಂದುರುಗಿ ಎಂದು ಕರೆಕೊಟ್ಟವರು ಯಾರು ?

17. ಮಹರ್ಷಿ ಕರ್ವೆರವರು ಸ್ಥಾಪಿಸಿದ ಮಹಿಳಾ ವಿಶ್ವವಿದ್ಯಾನಿಲಯವನ್ನು ಹೆಸರಿಸಿ.

18. ಭಾರತದ ಮೊಟ್ಟ ಮೊದಲ ಶಿಕ್ಷಕಿ ಯಾರು ?

19. ಸತಿ ಪದ್ಧತಿ ಎಂದರೇನು ?

20. ಭಾರತದಲ್ಲಿ ರೇಡಿಯೋ ಕ್ಲಬ್‌ಗಳನ್ನು ಪ್ರಾರಂಭಿಸಿದ್ದೆಲ್ಲಿ ?

21. ಬ್ರಹ್ಮಸಮಾಜದ ಸ್ಥಾಪಕರಾರು ?

22. ಮಹದ್ ಮತ್ತು ಕಾಲಾರಾಂ ಚಳುವಳಿಗಳನ್ನು ರೂಪಿಸಿದವರು ಯಾರು ?

23. ಹಿಂದೂ ಪುನರ್ ವಿವಾಹ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು ?

24. ಪ್ರಾರ್ಥನಾ ಸಮಾಜಕ್ಕೆ ಪ್ರಾರಂಭದಲ್ಲಿ ಏನು ಹೆಸರಿತ್ತು ?

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಎರಡ***ರಿಂದ ***ಮೂರು*** ವಾಕ್ಯಗಳಲ್ಲಿ ಉತ್ತರಿಸಿ : $25 \times 2 = 50$

25. ಸಾಮಾಜಿಕ ಬದಲಾವಣೆಗೆ ಪ್ರೇರಕವಾದ ಅಂಶಗಳನ್ನು ವಿವರಿಸಿ.

26. ಸಾಮಾಜಿಕ ಬದಲಾವಣೆಗಳ ಲಕ್ಷಣಗಳಾವುವು ?

27. ಕಿಂಗ್ಸ್‌ಲೇ ಡೇವಿಡ್ಸ್ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

28. ವಲಸೆಯ ಹೆಚ್ಚಳಕ್ಕೆ ಕಾರಣಗಳಾವುವು ?

29. ಪ್ರಾದೇಶಿಕ ಅಸಮತೋಲನಕ್ಕೆ ಕಾರಣಗಳೇನು ?

30. ಅನಕ್ಷರತೆಯ ಪರಿಣಾಮಗಳೇನು ?

31. ಜಾತಿ ಪದದ ಉಗಮವನ್ನು ತಿಳಿಸಿ.

32. ಪಕ್ಕಾ ಮತ್ತು ಕಚ್ಚಾ ಆಹಾರಕ್ಕಿರುವ ವ್ಯತ್ಯಾಸವೇನು ?

33. ಜಾತಿ ಪದ್ಧತಿಯ ಗುಣಲಕ್ಷಣಗಳೇನು ?

34. ಸಾಮಾಜಿಕ ಸುಧಾರಣಾ ಚಳುವಳಿತಂದ ಸಂಘಟನೆಗಳಾವುವು ?

35. ಕಬೀರ್ ಪಂಥದ ಪ್ರಮುಖ ಅಂಶಗಳಾವುವು ?

36. ಅಹಿಂಸಾ ಮಾರ್ಗದ ಕೆಲವು ಚಳುವಳಿಗಳನ್ನು ಹೆಸರಿಸಿ.

37. ಆಂಗ್ಲರ ಆಡಳಿತ ಕಾಲದಲ್ಲಿ ಜಾರಿಗೆ ತಂದ ವಿವಾಹಕ್ಕೆ ಸಂಬಂಧಪಟ್ಟ ಕಾನೂನುಗಳು ಯಾವುವು ?

38. ನಮ್ಮ ಸಂವಿಧಾನವು ಸ್ತ್ರೀಯರಿಗೆ ಸಮಾನತೆಯನ್ನು ಹೇಗೆ ನೀಡಿದೆ ?

39. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಿ.

40. ಭಾರತದಲ್ಲಿ ಬುಡಕಟ್ಟುಗಳಿಗಿರುವ ವಿವಿಧ ಹೆಸರುಗಳಾವುವು ?

41. ಬುಡಕಟ್ಟು ಜನಾಂಗಗಳ ಗುಣಲಕ್ಷಣಗಳನ್ನು ತಿಳಿಸಿ.

42. ಬುಡಕಟ್ಟುಗಳು ಪ್ರತ್ಯೇಕತೆಯನ್ನು ಉಳಿಸಿಕೊಳ್ಳಬೇಕೆ ? ನಿಮ್ಮ ಅನಿಸಿಕೆಯನ್ನು ಸಮರ್ಥಿಸಿ.

43. ಸ್ವಾತಂತ್ರ್ಯಾನಂತರದಲ್ಲಿ ಮಹಿಳಾ ಚಳುವಳಿಗಳನ್ನು ತಿಳಿಸಿ.

44. ಬೌದ್ಧರ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮವಾಗಿತ್ತು ಹೇಗೆಂದು ವಿವರಿಸಿ.

45. ಆಂಗ್ಲರ ವಿರುದ್ಧ ರೈತರು ನಡೆಸಿದ ಬಂಡಾಯಗಳಾವುವು ?

46. ಭಾರತೀಯ ಸಮಾಜಕ್ಕೆ ಸತ್ಯಶೋಧಕ ಸಮಾಜದ ಕೊಡುಗೆಗಳೇನು ?

47. ಭಾರತದಲ್ಲಿ ಮುಸಿಂ ಮಹಿಳೆಯರ ಇಂದಿನ ಸ್ಥಾನಮಾನದ ಬಗ್ಗೆ ಬರೆಯಿರಿ.

48. ಭಾರತದಲ್ಲಾದ ಮತ ಧರ್ಮ ಚಳುವಳಿಗಳನ್ನು ಹೆಸರಿಸಿ.

49. ಸಾಮಾಜಿಕ ಚಳುವಳಿಯ ಉದ್ದೇಶಗಳೇನು ?

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಆರರಿಂದ ಎಂಟು*** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

50. ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣದ ಪಾತ್ರವನ್ನು ವಿವರಿಸಿ.

***ಅಥವಾ***

ಸಾಮಾಜಿಕ ಬದಲಾವಣೆ ತರುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರವನ್ನು ವಿವರಿಸಿ.

51. 'ಆರ್ಥಿಕ ಅಭಿವೃದ್ಧಿಗೂ ಸಾಮಾಜಿಕ ಬದಲಾವಣೆಗೂ ನಿಕಟ ಸಂಬಂಧವಿದೆ' ಹೇಗೆ ?

***ಅಥವಾ***

ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗಿರುವ ವ್ಯತ್ಯಾಸಗಳೇನು ?

52. ಭಾರತದಲ್ಲಿ ಬುಡಕಟ್ಟುಗಳಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಬದಲಾವಣೆಗಳನ್ನು ವಿವರಿಸಿ.

**ಅಥವಾ**

ಭಾರತದಲ್ಲಿ ಬುಡಕಟ್ಟುಗಳ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸಿ.

53. ಸಾಮಾಜಿಕ ಬದಲಾವಣೆಗೆ ಜಾತಿ ಹೇಗೆ ಅಡ್ಡವಾಗಿದೆ ?

**ಅಥವಾ**

ಆಧುನಿಕ ಕಾಲದಲ್ಲಿ ಜಾತಿ ವ್ಯವಸ್ಥೆಯನ್ನು ವಿವರಿಸಿ.

54. ಭಾರತದಲ್ಲಿ ಸುಧಾರಣಾ ಚಳುವಳಿಗಳ ಇತಿಹಾಸವನ್ನು ತಿಳಿಸಿ.

**ಅಥವಾ**

ಭಾರತದಲ್ಲಿನ ಪ್ರತಿಭಟನಾತ್ಮಕ ಚಳುವಳಿಗಳ ಸ್ವರೂಪವನ್ನು ವಿವರಿಸಿ.

55. ಚಲನಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತದೆ ? ವಿವರಿಸಿ.

**ಅಥವಾ**

ಪ್ರಜಾಪ್ರಭುತ್ವ ದೇಶದಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ಪಾತ್ರವಹಿಸುತ್ತವೆ ? ವಿವರಿಸಿ.

V. ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ : $2 \times 4 = 8$

56. ಮಹಿಳಾ ಸಬಲೀಕರಣಕ್ಕೆ ಕಾರಣವಾಗುತ್ತಿರುವ ಅಂಶಗಳು ಯಾವುವು ?

57. ಭಾರತದ ಬುಡಕಟ್ಟುಗಳ ಬದಲಾವಣೆಯಲ್ಲಿ ಸರ್ಕಾರದ ಪಾತ್ರವನ್ನು ವಿವರಿಸಿ.